ವಿನಾಶಬುದ್ಧಿ ಎನ್ನಬೇಕೆ? ಶಿವನೇನೋ ರಕ್ಕಸನ ಅಟ್ಟಹಾಸದಿಂದ ತಪ್ಪಿಸಿಕೊಂಡ. ಆದರೆ ಅವನು ಭಸ್ಮಾಸುರನ ಸಾವಿಗೂ ಕಾರಣನಾದ. ಮೈಮರೆತಿದ್ದ ರಾಕ್ಷಸ ಕೊನೆಗೆ ತನ್ನ ತಲೆಯ ಮೇಲೆ ತಾನೇ ಕೈಯನ್ನು ಇಟ್ಟುಕೊಂಡ; ತತ್‌ಕ್ಷಣದಲ್ಲಿಯೇ ಸುಟ್ಟು ಭಸ್ಮವಾದ. ಭಸ್ಮಾಸುರ ದಿಟವಾಗಿ ಪಡೆದದ್ದು ವರವನ್ನಲ್ಲ; ಅದು ವರದ ರೂಪದಲ್ಲಿದ್ದ ಶಾಪವೇ ಹೌದು. ರಾಕ್ಷಸಬುದ್ಧಿ ಎಂದರೆ ಇದೇ: ಶಾಪವನ್ನೇ ವರ ಎಂದು ಭ್ರಮಿಸುವುದು; ಆ ಭ್ರಮೆಯ ಹಿಂದೆ ಆಸೆಯಿಂದ ಓಡುವುದು.

ಒಂಟೆ ಮಾಡಿದ್ದೂ ಇದನ್ನೇ – ಶಾಪವನ್ನೇ ವರ ಎಂದು ಭಾವಿಸಿಕೊಂಡು ಅದನ್ನು ಪಡೆದುಕೊಂಡಿತು; ಅದು ಮೃತ್ಯುವನ್ನು ಜೀವನ ಎಂದು ತಿಳಿದುಕೊಂಡು ಅದಕ್ಕೆ ಕೈ ಚಾಚಿತು. ಆ ಒಂಟೆಯ ದೈಹಿಕ ಮತ್ತು ಮಾನಸಿಕ ಆರೋಗ್ಯ ಸರಿ ಇರಲಿಲ್ಲವೇನೋ? ಈ ಕಾರಣದಿಂದ ಅದರ ಬುದ್ಧಿಯೂ ಕೈ ಕೊಟ್ಟಿತೆನಿಸುತ್ತದೆ. ದೇಹ–ಮನಸ್ಸು–ಬುದ್ಧಿಗಳು ಸರಿಯಿಲ್ಲದಿದ್ದಾಗ ಎಂಥವರೂ ಸೋಮಾರಿತನಕ್ಕೆ ತುತ್ತಾಗುತ್ತಾರೆ. ಒಂಟೆಗೆ ಆವರಿಸಿಕೊಂಡ ಅಪಾಯದ ಬಲೆಯಾದರೂ ಇದೇ. ತಾನು ಕುಳಿತ ಜಾಗದಿಂದಲೇ ಆಹಾರವನ್ನು ಸಂಪಾದಿಸಲು ಸಾಧ್ಯವಾದರೆ ಆಗ ಆಹಾರವನ್ನು ಹುಡುಕಿಕೊಂಡು ಅಲೆದಾಡುವ ಸಂದರ್ಭವೇ ಬರದು ಎಂದು ಯೋಚಿಸಿತು. ಸೋಮಾರಿತನ ಕಳ್ಳದಾರಿಯೊಂದನ್ನು ಅದಕ್ಕೆ ಹುಡುಕಿಕೊಟ್ಟಿತು. ಕತ್ತು ಉದ್ದವಾದರೆ ತಾನು ಇದ್ದಲ್ಲಿಯೇ ಇರಬಹುದು; ಕತ್ತನ್ನು ಮಾತ್ರ ಆಹಾರದ ಕಡೆಗೆ ಚಾಚಿ ಹೊಟ್ಟೆ ತುಂಬಿಸಿಕೊಳ್ಳಬಹುದು ಎಂದು ಲೆಕ್ಕಾಚಾರ ಹಾಕಿತು. ಅದಕ್ಕೆ ತಕ್ಕಂತೆಯೇ ವರವನ್ನೂ ಪಡೆಯಿತು. ಆದರೆ ಕತ್ತು ಉದ್ದವಾಗಿದ್ದುದೇ ಅದಕ್ಕೆ ಮಾರಕವಾಯಿತು; ಉದ್ದವಾಗಿ ಬೆಳೆದಿದ್ದ ಆ ಕತ್ತು ಗುಹೆಯಲ್ಲಿ ಸಿಕ್ಕು ಹೊರಗೇ ಬಾರದಂತಾಯಿತು. ಉದ್ದವಾದ ಕತ್ತು ಆ ಚಿಕ್ಕ ಗುಹೆಯಲ್ಲಿ ಅದರ ಪಾಲಿಗೆ ಬಲೆಯೇ ಆಯಿತು; ಕುಣಿಕೆಯೂ ಆಯಿತು. ಕೊನೆಗೆ ಸಾವನ್ನು ಅಪ್ಪಿತು.

ಸೋಮಾರಿತನ ಎನ್ನುವುದು ದೊಡ್ಡ ಶತ್ರುವಿನಂತೆ. ಅದೂ ನಮ್ಮ ಒಳಗೇ ಇರುವ ಶತ್ರು. ದುಡಿದು ತಿನ್ನುವುದರಿಂದ ಹೊಟ್ಟೆಯಷ್ಟೇ ತುಂಬದು; ತಿಂದದ್ದು ಸರಿಯಾಗಿ ಜೀರ್ಣವೂ ಆಗುವುದು. ಚೆನ್ನಾದ ಪಚನಕ್ರಿಯೆಯು ಆರೋಗ್ಯವನ್ನೂ ಕಾಪಾಡುತ್ತದೆ. ಆರೋಗ್ಯದಿಂದಿರುವ ದೇಹ–ಮನಸ್ಸು–ಬುದ್ಧಿಗಳಿಂದಲೇ ಬದುಕಿನ ಸತ್ಯವನ್ನೂ ಸೌಂದರ್ಯವನ್ನೂ ಸವಿಯಲು ಸಾಧ್ಯ. ಹೀಗಾಗಿ ಕ್ರಿಯಾಶೀಲತೆ ಎನ್ನುವುದು ಜೀವನದ ಸಂತಸಕ್ಕೂ ಸಂಭ್ರಮಕ್ಕೂ ಸಾರ್ಥಕತೆಗೂ ಆವಶ್ಯಕವಾದ ಗುಣ; ಅದು ಸ್ವಭಾವವೇ ಆಗಬೇಕೆನ್ನಿ!

ನಮ್ಮ ಇಂದಿನ ಪರಿಸ್ಥಿತಿಯೂ ಆ ಒಂಟೆಯ ಪಾಡಿನಂತೆಯೇ ಆಗಿದೆ. ನಾವು ಇಂದು ಸೋಮಾರಿಗಳಾಗುತ್ತಿದ್ದೇವೆ. ದೇಹಕ್ಕಾಗಲೀ ಬುದ್ಧಿಗಾಗಲೀ ಕೆಲಸವನ್ನೇ ಕೊಡಲಾರದಂಥ ಮಾನಸಿಕತೆಗೆ ಪಕ್ಕಾಗಿದ್ದೇವೆ. ಶ್ರಮಪಡುವುದು ಪಾಪ, ಅಸಹ್ಯ ಎಂಬಂಥ ವಿಚಿತ್ರ ಮನೋಧರ್ಮ ನಮ್ಮನ್ನು ಆವರಿಸಿಕೊಂಡಿದೆ. ಇದು ಪ್ರಧಾನವಾಗಿ ಎರಡು ನೆಲೆಯಲ್ಲಿ ನಮ್ಮನ್ನು ಅಧಃಪತನಕ್ಕೆ ನೂಕುತ್ತಿದೆ. ಮೊದಲನೆಯದಾಗಿ, ಇದು 'ನಾನು ಮತ್ತು ನನ್ನವರು' ಹಾಗೂ 'ಅವನು ಮತ್ತು ಅನ್ಯರು' ಎಂಬ ಒಡಕನ್ನು ನಮ್ಮಲ್ಲಿ ತುಂಬಿದೆ. ನಾನು ನನ್ನವರು ಸುಖವಾಗಿರಬೇಕು; ನನ್ನ ಸುಖಕ್ಕಾಗಿ ಇತರರೆಲ್ಲರೂ ದುಡಿಯಬೇಕು– ಎಂಬ ಸ್ವಾರ್ಥಬುದ್ಧಿಯನ್ನೂ ಶೋಷಣೆಯ ಜಾಣ್ಮೆಯನ್ನೂ ಕಲಿಸಿಕೊಟ್ಟಿದೆ. ಎರಡನೆಯದಾಗಿ, ದೈಹಿಕ ಶ್ರಮವನ್ನು ತಪ್ಪಿಸಿಕೊಳ್ಳುವ ಸಲುವಾಗಿ ನಾವು ಯಂತ್ರಗಳಿಗೆ ದಾಸರಾಗುವಂಥ ಹೀನಾಯ ಸ್ಥಿತಿಯನ್ನು ತಂದೊಡ್ಡಿದೆ.

ನಮ್ಮ ಜೀವನ ನಡೆಯುತ್ತಿರುವುದು ಹಲವರು ನೀಡಿರುವ ವರಗಳ ಕಾರಣದಿಂದಲೇ. ಇಡಿಯ ಸೃಷ್ಟಿ ಆಗಿರುವುದು ಪಂಚಭೂತಗಳಿಂದ; ಎಂದರೆ ಐದು ತತ್ತ್ವಗಳಿಂದ. ಈ ಐದು ತತ್ತ್ವಗಳು